**ಕರ್ನಾಟಕ ಸರ್ಕಾರ**
**(ಪಿ.ಆರ್.ಪಿ.67)**

**ಹೇಳಿಕೆ ಹಾಳೆ**
**(ಆರ್.ಪಿ.ಸಂಖ್ಯೆ 57)**
**ನಮೂನೆ ಸಂಖ್ಯೆ 4**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ ಃ 167/2021**

ಪ್ರಾಸಾ-3 ಚಾಸಾ- 3

| | | |
|---|---|---|
| ಸಾಕ್ಷಿದಾರರ ಹೆಸರುಃ | ಃ | ದಿನೇಶ |
| ತಂದೆಯ ಹೆಸರುಃ | ಃ | ಪುಟ್ಟಯ್ಯ |
| ವಯಸ್ಸುಃ | ಃ | 39 ವರ್ಷ |
| ಉದ್ಯೋಗಃ | ಃ | ಮಡಬಲು ಗ್ರಾಮಪಂಚಾಯಿತಿಯಲ್ಲಿ ಅಟೆಂಡರ್ |
| ವಾಸಃ | ಃ | ಬೆಳಮೆ ಗ್ರಾಮ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 13-11-2024**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಪ್ರಾಸಾ-1, 2, ಚಾಸಾ-4 ಮತ್ತು 5ರವರ ಪರಿಚಯ ಇದೆ. ನ್ಯಾಯಾಲಯದ ಮುಂದಿರುವ ಆರೋಪಿತನ ಪರಿಚಯವಿದೆ. ನಾನು ಮಡಬಲು ಗ್ರಾಮ ಪಂಚಾಯಿತಿಯಲ್ಲಿ ಅಟೆಂಡರ್ ಆಗಿ 2016ರಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಪ್ರಾಸಾ-1ರವರು ನಮ್ಮ ಗ್ರಾಮ ಪಂಚಾಯಿತಿಯ ಪಿಡಿಒ ಆಗಿದ್ದರು. ಪ್ರಾಸಾ-2 ಕ್ಲರ್ಕ್ ಕಮ್ ಡಾಟಾ ಎಂಟ್ರಿ ಕೆಲಸ ಮಾಡುತ್ತಾರೆ. ನನ್ನ ಮ ಕೆಲಸದ ಅವಧಿ ಬೆಳಿಗ್ಗೆ 10.30 ರಿಂದ ಸಂಜೆ 5-30.

2.ದಿನಾಂಕ 31.08.2020ರಂದು ಗ್ರಾಮಪಂಚಾಯಿತಿಯಲ್ಲಿ ಸಂಜೆ 4-45ಗಂಟೆಗೆ ನ್ಯಾಯಾಲಯದ ಮುಂದಿರುವ ಆರೋಪಿತ ಪ್ರಾಸಾ-1ರವರ ಬಳಿ ಬಂದು ತನಗೆ ಸಂಬಂಧಪಟ್ಟ ಕಾಳು ಮೆಣಸು ಬೆಳೆಯಲು ನೀಡುವ ಸಹಾಯಧನದ ಯಾಕೆ ಅಪ್ರೂವಲ್ ಮಾಡಿಲ್ಲವೆಂದು ಗಲಾಟೆ ಮಾಡಿ ಬೋಳಿಮಗನೆ, ಸೂಳೆಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದರು. ಆಗ ಪಿಡಿಒ ರವರು

ಜಿಲ್ಲಾ ಪಂಚಾಯತ್ ನಿಂದ ಅಪ್ರೂವಲ್ ನೀಡಿಲ್ಲ ನೀಡಿದ ನಂತರ ಕೊಡುತ್ತೇನೆ ಎಂದು ಹೇಳಿದರು. ನಂತರ ಪುನಃ 01.09.2020ರಂದು ಸಂಜೆ 4-50ರ ಸುಮಾರಿಗೆ ಆರೋಪಿತ ಕಛೇರಿಗೆ ಬಂದು ಕಾಳುಮೆಣಸಿನ ಸಹಾಯಧನ ಏಕೆ ನೀಡಿಲ್ಲ ಎಂದು ಹೇಳಿ ಪ್ರಾಸಾ-1ರವರಿಗೆ ಮಚ್ಚಿನಿಂದ ಬೀಸಿದ. ಪಿಡಿಓ ರವರು ವೀಲ್ ಚೇರ್ ನಲ್ಲಿ ಕುತಿದ್ದರಿಂದ ಏಟು ಅವರ ಕುತ್ತಿಗೆ ಎಡಭಾಗಕ್ಕೆ ಬಿದ್ದು ಗಾಯವಾಯಿತು. ಆಗ ಅಲ್ಲಿದ್ದಂತಹ ಸಿಪಿಯು, ಮಾನೀಟರ್, ಹೆಬ್ಬೆಟ್ಟಿನ ಹಾಜರಾತಿ ಮಿಷಿನ್ ಬಿದ್ದು ಹಾಳಾಯಿತು. ಪ್ರಾಸಾ-1ರವರಿಗೆ ಏಟಾಗಿದ್ದರಿಂದ ಅವರನ್ನು ಪ್ರಾಸಾ-2 ಹಾಗೂ ನಾನು ಆಲೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನ್ಯಾಯಾಲಯದ ಮುಂದಿರುವ ಎಂ.ಓ.1 ಮಚ್ಚು(ಲಾಂಗ್) ಆರೋಪಿತ ಹಲ್ಲೆ ಮಾಡಲು ಉಪಯೋಗಿಸಿದ ಮಚ್ಚು ಆಗಿದೆ. ಈಗ ತೋರಿಸಿದ ಎಂ.ಓ.3 ಸದರಿ ಮಾನೀಟರ್, ಎಂ.ಓ.4 ಡಿವಿಆರ್ ಆಗಿದೆ.

3 ದಿನಾಂಕ 02.09.2020ರಂದು ಪೊಲೀಸರು ನನ್ನನ್ನು ಮತ್ತು ಪ್ರಾಸಾ-2ರವರನ್ನು ಆಲೂರು ಪೊಲೀಸ್ ಠಾಣೆಗೆ ಕರೆದರು. ಅಲ್ಲಿ ಪ್ರಾಸಾ-1ರವರಿಗೆ ಪೊಲೀಸರು ಶರ್ಟನ್ನು ನೀಡಿದರು. ಪ್ರಾಸಾ-1ರವರು ನಂತರ ಆ ಶರ್ಟನ್ನು ಪೊಲೀಸರಿಗೆ ನೀಡಿದರು. ಆ ಸಂದರ್ಭದಲ್ಲಿ ಪೊಲೀಸರು ಈ ಕುರಿತು ನಿಪಿ-2ರ ಮಹಜರ್ ಕ್ರಮ ಜರುಗಿಸಿದರು. ನಿಪಿ-2ರಲ್ಲಿರುವ ನನ್ನ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಅಂದು ಅಮಾನತ್ತುಪಡಿಸಿದ ಶರ್ಟ್ ನ್ನು ಈಗಾಗಲೇ ಎಂ.ಓ.2 ಎಂದು ಗುರುತಿಗೊಳಪಡಿಸಲಾಗಿದ್ದು ಅದನ್ನು ನೋಡಿ ಗುರುತಿಸಿದ್ದೇನೆ.

4. ದಿನಾಂಕ 24.12.2020ರಂದು ಪೊಲೀಸ್ ಠಾಣೆಯಲ್ಲಿ ಸಿಸಿಕ್ಯಾಮೆರಾ ಓಪನ್ ಮಾಡಿ ಡಿವಿಆರ್ ಚೆಕ್ ಮಾಡಿ ನಿಜವೋ ಎಂದು ನೋಡಿದರು. ನಾವು ನಿಜವೆಂದು ಒಪ್ಪಿಕೊಂಡೆವು. ಈ ಬಗ್ಗೆ ಮಹಜರನ್ನು ಮಾಡಿದರು. ಸದರಿ ಮಹಜರ್ ಈಗಾಗಲೇ ನಿಪಿ-3 ಎಂದು ಗುರುತಿಗೊಳಪಟ್ಟಿದೆ, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಸದರಿ ಡಿವಿಆರ್ ನ್ಯಾಯಾಲಯದ ಮುಂದಿರುವ ಎಂ.ಓ.4 ಆಗಿದೆ. ಆರೋಪಿತ ಕೊಲೆ ಮಾಡುವ ಉದ್ದೇಶದಿಂದಲೇ ಪಿಡಿಓ ರವರಿಗೆ ಮಚ್ಚಿನಿಂದ ಹಲ್ಲೆ ಮಾಡಿದ್ದಾರೆ. ಈ ಸಂಬಂಧ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಹೆಚ್.ಎಸ್.ಎಂ. ವಕೀಲರಿಂದಃ-**

ನಾನು ಮಡಬಲು ಗ್ರಾಮಪಂಚಾಯಿತಿಯಲ್ಲಿ 8 ವರ್ಷಗಳಿಂದ ಅಟೆಂಡರ್ ಆಗಿ ಕೆಲಸ

ಮಾಡುತ್ತಿದ್ದೇನೆ. ನನ್ನ ಮೇಲಧಿಕಾರಿ ಪಿಡಿಓ ಪ್ರಾಸಾ-1 ಆಗಿದ್ದಾರೆ. 31.08.2020ರಂದು 4.45ಗಂಟೆಗೆ ಆರೋಪಿತ ಗ್ರಾಮ ಪಂಚಾಯಿತಿ ಕಛೇರಿಗೆ ಬಂದಿದ್ದರು. ಕಾಳುಮೆಣಸು ಬೆಳೆಯ ಸಹಾಯಧನ ಪಡೆಯಲು ಹೆಸರು ಮಂಜೂರಾಗಿಲ್ಲವೆಂದು ಪ್ರಾಸಾ-1ರವರಲ್ಲಿ ಬಂದು ಪ್ರಶ್ನಿಸಿದ್ದಾರೆ. ನಾನು ಮನೆಗೆ ಊಟಕ್ಕೆ ಹೋಗಿ ಹಿಂದಿರುಗಿ ಬಾಗಿಲ ಬಳಿ ಬಂದಾಗ ಆರೋಪಿತ ಹೊರಟುಹೋದರು. ಆರೋಪಿತ ಏನು ಮಾತಾಡಿದ್ದಾನೆ ಎಂದು ಖುದ್ದು ನನಗೆ ಗೊತ್ತಿಲ್ಲ. ನಾನು ಮನೆಗೆ ಊಟಕ್ಕೆ ಹೋಗಿ ಹಿಂದಿರುಗಿ ಬಾಗಿಲ ಬಳಿ ಬಂದಾಗ ಆರೋಪಿತ ಹೊರಟುಹೋದರು, ಆರೋಪಿತ ಏನು ಮಾತಾಡಿದ್ದಾನೆ ಎಂದು ಖುದ್ದು ನನಗೆ ಗೊತ್ತಿಲ್ಲ ಎಂಬುದಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಪಿಡಿಓ ಬಳಿ ಆರೋಪಿತ ಹೋಗಿ ಏನು ಮಾತಾಡಿದ್ದಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ, ಪಿಡಿಓ ಆ ನಂತರ ನನಗೆ ಹೇಳಿದ್ದಾರೆ.

2. ದಿನಾಂಕ 01.09.2020ರಂದು 4-45ಕ್ಕೆ ಆರೋಪಿತ ಕಛೇರಿಗೆ ಬಂದಿರುತ್ತಾರೆ. ಆ ಸಂದರ್ಭದಲ್ಲಿ ನಾನು ಜಿಪಿಎಸ್ ಮಾಡಲು ಎಂದರೆ ಮನೆಕಟ್ಟಲು ಸಹಾಯಧನ ನೀಡಿದವರ ಮನೆ ಯಾವ ಹಂತದಲ್ಲಿ ಇದೆ ಎಂಬ ಬಗ್ಗೆ ಫೋಟೋ ತೆಗೆದು ಅಪ್ಲೋಡ್ ಮಾಡಲು ಹೋಗಿದ್ದೆ. ನಾನೊಬ್ಬನೇ ಹೋಗಿದ್ದೆ. ಗಲಾಟೆಯಾದ ತಕ್ಷಣ ಪಿಡಿಓರವರು ನನಗೆ ಫೋನ್ ಕರೆ ಮಾಡಿದರು. ತಕ್ಷಣ 100ಮೀಟರ್ ದೂರದಲ್ಲಿದ್ದ ನಾನು ಕಛೇರಿಗೆ ಬಂದೆ, ಗಲಾಟೆ ಮುಗಿದಿತ್ತು. ಇದೇ ಪ್ರಕಾರ ಪೊಲೀಸರಿಗೆ ನಾನು ಹೇಳಿಕೆಯನ್ನು ನೀಡಿದ್ದೇನೆ. ನಾನು ಕಛೇರಿಗೆ ಬರಬೇಕಾದರೆ ಆರೋಪಿತ ಮತ್ತು ಇತರರು ಇರಲಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಗೆ ಸಂಜೆ 5-30 – 6.00 ಗಂಟೆಗೆ ಹೋಗಿದ್ದೆವು. ಆಸ್ಪತ್ರೆಯಲ್ಲಿ ವೈದ್ಯರು ನನ್ನ ಹೆಸರನ್ನು ಕೇಳಿದರು. ಪೊಲೀಸರು ಆಸ್ಪತ್ರೆಗೆ ಬಂದಿದ್ದರೋ ಎಂದರೆ ಅದಾಗಲೇ ಪಂಚಾಯತ್ ಕಛೇರಿಯ ಬಳಿ ಬಂದು ಆರೋಪಿತನನ್ನು ಕರೆದುಕೊಂಡು ಹೋಗಿದ್ದರು. ಪುನಃ ಅದೇ ದಿನ ಆಸ್ಪತ್ರೆಗೆ ಬಂದು ಪ್ರಾಸಾ-1ರವರ ಮತ್ತು ನನ್ನ ಹೇಳಿಕೆಯನ್ನು ಪೊಲೀಸರು ಪಡೆದುಕೊಂಡರು. ಪೊಲೀಸರು 2 ಸಿಪಿಯು, 2 ಮಾನೀಟರ್, ಒಂದು ಪ್ರಿಂಟರ್ ಮತ್ತು ಒಂದು ಬಯೋಮೆಟ್ರಿಕ್ ತೆಗೆದುಕೊಂಡು ಹೋದರು ಎನ್ನುವುದು ನಿಜ. ನ್ಯಾಯಾಲಯದ ಮುಂದೆ 2 ಸಿಪಿಯು, 2 ಮಾನೀಟರ್, ಒಂದು ಪ್ರಿಂಟರ್ ಮತ್ತು ಒಂದು ಬಯೋಮೆಟ್ರಿಕ್ ಇದೆಯೋ ಎಂದರೆ ಮಾನೀಟರ್ ಇದೆ. ಪೊಲೀಸರು ಘಟನೆಯ ದಿನ ಮಡಬಲು ಗ್ರಾಮಪಂಚಾಯಿತಿ ಕಛೇರಿಗೆ ಬಂದಾಗಲೇ ಡಿವಿಆರ್ ತೆಗೆದುಕೊಂಡು ಹೋಗಿರುತ್ತಾರೆ. ನಿಪಿ-3ಕ್ಕೆ ಅದೇ ದಿನ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ನನ್ನ ಸಹಿ ಪಡೆದಿದ್ದಾರೆ. ನಿಪಿ-3ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

4.ಮಹಜರುಗಳನ್ನು ಸೃಷ್ಟಿ ಮಾಡಿ ಪೊಲೀಸರು ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ, ಆರೋಪಿತನಿಗೂ ಈ ಘಟನೆಗೂ ಯಾವುದೇ ಸಂಬಂಧ ಇಲ್ಲ,ಘಟನೆಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾಳುಮೆಣಸು ಬೆಳೆಯ ಸಹಾಯಧನ ಕೋರಿ ಆರೋಪಿತ ಅರ್ಜಿ ಸಲ್ಲಿಸಿದಾಗ, ಆತನಲ್ಲಿ ಪ್ರಾಸಾ-1 ಹಣದ ಬೇಡಿಕೆ ಇಟ್ಟು ಆರೋಪಿತ ನೀಡದೇ ಇದ್ದುದರಿಂದಲೇ ಈ ರೀತಿ ಆತನ ಮೇಲೆ ಕೇಸು ಹಾಕಲಾಗಿದೆ ಎಂದರೆ ಸುಳ್ಳು. ಪ್ರಾಸಾ-1ರವರ ಕೈಕೆಳಗೆ ನಾವು ಕೆಲಸ ಮಾಡುತ್ತಿರುವುದರಿಂದ ಅವರು ಹೇಳಿದಂತೆ ಬಂದು ಸಾಕ್ಷ್ಯವನ್ನು ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**